ಮೂಲ ದಾವಾ ನಂಃ 17/2023

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **13.01.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್.ಎ.ಎನ್ 9 ರಿಂದ 12 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಮ್ಮ ತಾಯಿಯವರ ಜಮೀನು ಬೇಕೆಂದು ಕೋರಿ, ನಾನು ಈ ದಾವೆಯನ್ನು ದಾಖಲು ಮಾಡಿರುತ್ತೇನೆ. ನಮ್ಮ ಅಜ್ಜನ ಹೆಸರು ಈರಪ್ಪ ಹರಿಜನ, ನಮ್ಮ ಅಜ್ಜಿಯ ಹೆಸರು ಮರಿಯವ್ವ ಈರಪ್ಪ ಹರಿಜನ. ನಮ್ಮ ಅಜ್ಜನಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ನಮ್ಮ ಅಜ್ಜನಿಗೆ ಹರಗನಹಳ್ಳಿ ಗ್ರಾಮದ ಸರ್ವೇ ನಂಬರ್ 32 ರಲ್ಲಿ ಒಟ್ಟು 4 ಎಕರೆ 14 ಗುಂಟೆ ಜಮೀನು ಇತ್ತು. ಸದರಿ ಆಸ್ತಿ ನಮ್ಮ ಅಜ್ಜನವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಮ್ಮ ಅಜ್ಜ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆಂದು, ನನಗೆ ಹೇಳಲು ಬರುವುದಿಲ್ಲ, ನಾನು ಅವಾಗ ಸಣ್ಣವನಿದ್ದೆ. ನಮ್ಮ ಅಜ್ಜ ತೀರಿಕೊಂಡ ನಂತರ, ನಮ್ಮ ತಾಯಿಯ ಹೆಸರನ್ನು ಹೊರತುಪಡಿಸಿ, ಅವರ ಉಳಿದ ಸಹೋದರ ಸಹೋದರಿಯರ ಹೆಸರು ಜಂಟಿಯಾಗಿ ಆಸ್ತಿಯ ದಾಖಲೆಗಳಲ್ಲಿ ದಾಖಲಾಗಿರುತ್ತದೆ. ಸದರಿಯವರು ತಮ್ಮ ಹೆಸರನ್ನು ಯಾವ ವರ್ಷದಲ್ಲಿ ದಾಖಲು ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ಮಾವ ಬಸಪ್ಪ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ಸದರಿ ಬಸಪ್ಪ ತೀರಿಕೊಂಡ ನಂತರ, ವಾರಿಸಾ ಪ್ರಕಾರ, ಅಜ್ಜಪ್ಪ, ಗಂಗವ್ವ ಮತ್ತು ಶಿವಪ್ಪರವರ ಹೆಸರು ಬಂದಿತು.

1994 ರಲ್ಲಿ ಮಾಡಿಕೊಂಡಂತಹ ಎಂಟ್ರಿ ನಂಬರ್ 1066 ಸರಿ ಇರುವುದಿಲ್ಲ. ಅದನ್ನು ರದ್ದುಪಡಿಸಬೇಕು. ನಮ್ಮ ತಾಯಿಯ ಜಮೀನು ಬೇಕು. ಅದೇ ರೀತಿ ಎಂಟ್ರಿ ನಂಬರ್ 796 ನೇದನ್ನೂ ಸಹ ರದ್ದುಪಡಿಸಬೇಕು. ದಾವಾಸ್ತಿಯಲ್ಲಿ ಒಟ್ಟು 6 ಹಿಸ್ಸೆಯಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**